ತರಗತಿ : 9ನೇ ತರಗತಿ

ಪಾಠದ ಹೆಸರು : ಪ್ರಜಾನಿಷ್ಠೆ

ಕೃತಿಕಾರರ ಹೆಸರು : ಸಾ . ಶಿ .ಮರುಳಯ್ಯ

## ಕೃತಿಕಾರರ ಪರಿಚಯ :



### ಸಾ . ಶಿ .ಮರುಳಯ್ಯ :

ಶ್ರೀ ಸಾಸಲು ಶಿವರುದ್ರಯ್ಯ ಮರುಳಯ್ಯ ಇವರು ಕ್ರಿ.ಶ. 1931 ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಾಸಲು ಗ್ರಾಮದಲ್ಲಿ ಜನಿಸಿದರು, ಇವರ ತಂದೆ ಶಿವರುದ್ರಯ್ಯ , ತಾಯಿ ಸಿದ್ದಮ್ಮ , ಇವರು ಕ್ರಿಶ 1956 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ . ಎ . ಪದವಿಯನ್ನು ಮತ್ತು ಕ್ರಿ ಶ 1971 ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ' ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ ' ಕುರಿತ ಮಹಾಪ್ರಬಂಧಕ್ಕೆ ಪಿಎಚ್.ಡಿ . ಪದವಿಯನ್ನು ಪಡೆದರು . ಕ್ರಿ . ಶ . 1999 ರಿಂದ 1998 ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು . ರಾಜ್ಯಭಾಷಾ ಆಯೋಗದ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದರು .

## ಆ ] ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ ,

**1.** ಬನದಮ್ಮನ ಹಳ್ಳಿಯ ಜನರು ಎಲ್ಲಿ ಪಂಚಾಯಿತಿ ಸೇರಿದ್ದರು **?**

ಉತ್ತರ : ಬನದಮ್ಮನ ಹಳ್ಳಿಯ ಜನರು ಬನಶಂಕರಿಯ ದೇವಾಲಯದ ಮುಂಭಾಗದ ಕಟ್ಟೆಯ ಮೇಲೆ ಪಂಚಾಯಿತಿ ಸೇರಿದ್ದರು .

**2.** ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ಯಾರಾರ ನಡುವಿನ ನ್ಯಾಯ ತೀರ್ಮಾನವಾಗುತ್ತಿತ್ತು **?**

ಉತ್ತರ : ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ಬೀರಣ್ಣ ಮತ್ತು ಈರಣ್ಣರ ನಡುವಿನ ನ್ಯಾಯ ತೀರ್ಮಾನವಾಗುತ್ತಿತ್ತು .

**3.** ಚೋಳರು ಮತ್ತು ಹೊಯ್ಸಳರ ನಡುವೆ ಎಲ್ಲಿ ಯುದ್ಧ ನಡೆಯಿತು **?**

ಉತ್ತರ : ಚೋಳರು ಮತ್ತು ಹೊಯ್ಸಳರ ನಡುವೆ ಮಳವಳ್ಳಿ , ಮುಡುಕುತೊರೆಗಳ ಬಳಿಯಲ್ಲಿ ಯುದ್ಧ ನಡೆಯಿತು .

**4.** ಸಾಮ್ರಾಟನು ರಾಜಧಾನಿಯಲ್ಲಿ ಇಲ್ಲದಿದ್ದಾಗ ರಾಜ್ಯದ ಸಂರಕ್ಷಕರಾಗಿ ನಿಂತಿದ್ದವರು ಯಾರು **?**


| Download: Kannadapdf.com | https://kannadapdf.com/ |
|---|---|

ಉತ್ತರ : ಸಾಮ್ರಾಟನು ರಾಜಧಾನಿಯಲ್ಲಿ ಇಲ್ಲದಿದ್ದಾಗ ರಾಜ್ಯದ ಸಂರಕ್ಷಕರಾಗಿ ನಿಂತಿದ್ದವರು ರಾಣಿ ಶಾಂತಲಾದೇವಿ ಮತ್ತು ಯುವರಾಜ ಉದಯಾದಿತ್ಯ

## ಆ ] ಕೊಟ್ಟಿರುವ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .

**1. ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಯಾದ ವಿಚಾರವಾಗಿ ಚರ್ಚೆ ನಡೆದಿತ್ತು ?**

ಉತ್ತರ : ಬೀರಣ್ಣ ತನ್ನ ಹೊಲವನ್ನು ನೂರೆಂಟು ಹೊನ್ನಿಗೆ ಈರಣ್ಣನಿಗೆ ಮಾಡಿದ್ದನು . ಈರಣ್ಣ ಹೊಲ ಉಳುತ್ತಿದ್ದಾಗ ಆ ಹೊಲದಲ್ಲಿ ಒಂದು ಕೊಪ್ಪರಿಗೆಯನ್ನು ಹೊನ್ನು ಸಿಕ್ಕಿತು . ಅವನು ಅದನ್ನು ಪೂಜೆ ಮಾಡಿ ಬೀರಣ್ಣನ ಮನೆಗೆ ತೆಗೆದುಕೊಂಡು ಹೋಗಿ " ಈ ಹೊನ್ನು ನಿನ್ನದು ತೆಗೆದುಕೋ " ಎಂದನು . ಆದರೆ ಬೀರಣ್ಣ " ನಿನಗೆ ಹೊಲ ಮಾರಿದ ಮೇಲೆ ಅದು ನಿನಗೇ ಸೇರಬೇಕು . ಅದು ನನ್ನದಲ್ಲ " ಎಂದು ನಿರಾಕರಿಸಿದನು . ಆ ವಿಚಾರವಾಗಿ ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಚರ್ಚೆ ನಡೆದಿತ್ತು . " ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ ... ಅವರ ಬೆವರಿನ ಫಲ ಅಲ್ಲ ... ಅದು ಪ್ರಜೆಗಳ ಬೆವರಿನ ಫಲ ಆದ್ದರಿಂದ ಅದು ಪ್ರಜೆಗಳಿಗೆ ಸೇರಬೇಕು " ಎಂದು ಅಭಿಪ್ರಾಯಪಟ್ಟಳು .

**2. ಹಲವರು ತಲಕಾಡನ್ನು ಲೂಟಿ ಮಾಡಬೇಕೆಂದು ಹೇಳಿದಾಗ ದೊರೆ ವಿಷ್ಣುವರ್ಧನನು ಏನೆಂದು ಹೇಳಿದನು ?**

ಉತ್ತರ : ತಲಕಾಡಿನ ಲೂಟಿಯ ಬಗ್ಗೆ ವಿಷ್ಣುವರ್ಧನನು , " ಸೆರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ : ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ . ಆ ಕಾರಣ ನೀವೆಲ್ಲರೂ ತಲಕಾಡವರನ್ನು ತಮ್ಮವರೆಂದೇ ತಿಳಿದು ನಡೆಸಿಕೊಳ್ಳಿ . ಅವರ ಮನೋಭೀತಿಯನ್ನು ದೂರ ಮಾಡಿ ಶಾಂತಿ ಸ್ಥಾಪನೆ ಮಾಡಿ , ನಾಲ್ಕು ದಿನಗಳಾದ ಮೇಲೆ ರಾಜಧಾನಿಗೆ ಹಿಂದಿರುಗೋಣ . " ಎಂದು ಹೇಳಿದನು .

**3. ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವೇನು ?**

ಉತ್ತರ : ಈರಣ್ಣ ಮತ್ತು ಬೀರಣ್ಣ ಇಬ್ಬರೂ ಕೊಪ್ಪರಿಗೆ ಬಂಗಾರವನ್ನು ತಮ್ಮ ಬಳಿ ಇಟ್ಟುಕೊಳ್ಳಲು ಒಪ್ಪದಿದ್ದಾಗ ಗ್ರಾಮದ ಮುಖ್ಯಸ್ಥ ಕೇತುಮಲ್ಲ ' ಇಬ್ಬರಿಗೂ ಬೇಡವಾದ ಹಣ ರಾಜ್ಯದ ಬೊಕ್ಕಸ ಸೇರಲಿ ' ಎಂದನು . ನ್ಯಾಯ ತೀರ್ಮಾನ ಮಾಡುತ್ತಾನೆ . ಕೂಡಲೆ ಮರದ ಮರೆಯಲ್ಲಿದ್ದ ಶಾಂತಲೆ ಮುಂದೆ ಬಂದು , " ಕೂಡದು ... ಕೂಡದು ... ' – ಎಂದು ಕೂಗಿದಳು . ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ ...ಅವರ ಬೆವರಿನ ಫಲ ಅಲ್ಲ ... ಅದು ಪ್ರಜೆಗಳ ಬೆವರಿನ ಫಲ " ಆದ್ದರಿಂದ ಅದು ನಿಮ್ಮ ಊರಿನ ಹಣ ನಿಮ್ಮೂರಿನ ಏಳಿಗೆಗಾಗಿಯೇ ವಿನಿಯೋಗವಾಗಲಿ . " ಎಂದು ಅಭಿಪ್ರಾಯ ಪಟ್ಟಳು

**4. ಶಾಂತಲೆಯು ನೀಡಿದ ತೀರ್ಪೇನು ?**



Kannadapdf.com

ಉತ್ತರ : " ಇದು . ದೈವದ ದುಡ್ಡು , ದೇವಕಾರ್ಯಕ್ಕೆ ವಿನಿಯೋಗವಾಗಬೇಕಾದ್ದು ಧರ್ಮ . ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಒಂದು ಕಲಾದೇಗುಲವನ್ನು ರಾಜಧಾನಿ ದ್ವಾರಸಮುದ್ರದಲ್ಲಿ ನಿರ್ಮಿಸಬೇಕು , ಅವಳಿ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಿರಬೇಕು ... ಒಂದು ಕಲಾಪೂರ್ಣ ದೇವಾಲಯಕ್ಕಾಗಿ ಈ ಹೊನ್ನು ವಿನಿಯೋಗವಾಗಲಿ , ಆ ದೇವಾಲಯಗಳನ್ನು ಕೇತಮಲ್ಲನಾಯಕರ ಹೆಸರಿನಲ್ಲಿ ಕಟ್ಟಬೇಕು " ಎಂದು ಶಾಂತಲೆ ತೀರ್ಪು ನೀಡಿದಳು .

## ಇ ] ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸಿ

**1.** ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ ,

ಉತ್ತರ : ಪಂಚಾಯಿತಿಯಲ್ಲಿ ಬೀರಣ್ಣ ಮತ್ತು ಈರಣ್ಣ ಒಬ್ಬರಿಗೊಬ್ಬರು ಹೊನ್ನು ತಮ್ಮದಲ್ಲ ಎಂದಾಗ ಊರಿನ ಮುಖಂಡ ಕೇತಮಲ್ಲನು " ಇವರಿಬ್ಬರಿಗೂ ಬೇಡವೆಂದ ಮೇಲೆ ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಲಿ " ಎಂದನು . ಇದನ್ನೆಲ್ಲ ಉದಯಾದಿತ್ಯನೊಡನೆ ಮರೆಯಲ್ಲಿ ನಿಂತು ನೋಡುತ್ತಿದ್ದ ಶಾಂತಲೆ " ಕೂಡದು .. ಕೂಡದು .. " ಎಂದಾಗ ಎಲ್ಲರ ಗಮನ ಅತ್ತ ಹೋಯಿತು . ಕೇತಮಲ್ಲನು ಗಂಡುಡೆಯಲ್ಲಿದ್ದ ಶಾಂತಲೆಯನ್ನು ಗುರುತಿಸದೆ " ನೀವು ... ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಬಾರದು ಅಂದಿರಲ್ಲಾ ಯಾಕೆ ? " ಎಂದನು ಅದಕ್ಕವಳು " ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ ... ಅದು ಪ್ರಜೆಗಳ ಬೆವರಿನ ಫಲ ! ಆದ್ದರಿಂದ ಅದು ಪ್ರಜೆಗಳಿಗೇ ಸೇರಬೇಕು " ಎಂದಳು . ಆ ಮಾತಿಗೆ ಕೇಶಮಲ್ಲನು " ಹಾಗಾದರೆ ಪ್ರಜೆಗಳು ಯಾರವರು ? ಹೊಯ್ಸಳೇಶ್ವರರ ಮಕ್ಕಳಲ್ಲವೇ ? ಮಕ್ಕಳ ದುಡಿಮೆ ತಂದೆಯದ್ದಲ್ಲವೇ ? " ಎಂದನು . ಅವನ ವಾದವನ್ನು ಕೇಳಿದ ಶಾಂತಲೆ " ನಿಮ್ಮ ಊರಿನ ಹಣ ನಿಮ್ಮ ಊರಿಗೆ ವಿನಿಯೋಗವಾಗಲಿ " ಎಂದಳು . ನಂತರ ಉದಯಾದಿತ್ಯ ಅವರು ಗಂಡುಡೆಯಲ್ಲಿರುವ ಶಾಂತಲಾದೇವಿ ಎಂದು ತಿಳಿಸಿದ ನಂತರ ಎಲ್ಲರೂ ಅವರಿಗೆ ತಮ್ಮ ಭಕ್ತಿ ಸಮರ್ಪಿಸಿದರು . ನಂತರ ಊರಿನ ಜನ ತಮಗೆ ಆ ಹೊನ್ನಿನ ಅವಶ್ಯಕತೆಯಿಲ್ಲ . ಅದು ರಾಜ್ಯದ ಕ್ಷೇಮಕ್ಕೆ ಮೀಸಲು . ಎಂದಾಗ " ಇದು ದೈವದ ದುಡ್ಡು , ದೇವಕಾರ್ಯಕ್ಕೆ ವಿನಿಯೋಗವಾಗಬೇಕಾದ್ದು ಧರ್ಮ . ರಾಜಧಾನಿ ದ್ವಾರಸಮುದ್ರದಲ್ಲಿ ಹೊಯ್ಸಳರ ಶೈಲಿಗೆ ಮಾದರಿಯಾದಂತಹ ಅವಳಿ ದೇವಾಲಯ ನಿರ್ಮಾಣಕ್ಕಾಗಿ ಈ ಹೊನ್ನು ವಿನಿಯೋಗವಾಗಲಿ " ಎಂದು ಶಾಂತಲೆ ತೀರ್ಪು ನೀಡಿದಳು .

**2.** ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ .

ಉತ್ತರ : ದಿನೇದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನನನ್ನು ಬಡಿಯಬೇಕೆಂದು ಶತ್ರು ರಾಜರುಗಳನೇಕರು ಹವಣಿಸುತ್ತಿದ್ದರು . ಅವರಲ್ಲಿ ಚೋಳಮಂಡಲದ ಕುಲೋತ್ತುಂಗ ಪ್ರಮುಖನಾದವನು . ಕುಲೋತ್ತುಂಗ ಪ್ರಚಂಡ ಆಶಾವಾದಿ . ಅಖಂಡ ಭರತಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾಪಿಶಾಚಿ , ಗಂಗ ಸಾಮ್ರಾಜ್ಯವನ್ನು ತನ್ನ ವಶ ಮಾಡಿಕೊಳ್ಳಲೆಂದು ಆಶಿಸಿ , ಅಡಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಕಳುಹಿಸಿದ . ಇದನ್ನು ಗುಪ್ತಚಾರರಿಂದ ತಿಳಿದ ಹೊಯ್ಸಳೇಶ್ವರನು ಸಕಲ ಸೇನಾ ಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾದನು . ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರಯಾತ್ರೆ ಹೊರಟಿತು . ಮಳವಳ್ಳಿ , ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು , ಹೊಯ್ಸಳರ ಕೈ ಮೇಲಾಗಿ ಚೋಳಸೇನೆ ಕಂಗಾಲಾಯಿತು . ಆದಿಯಮ ಯುದ್ಧದಲ್ಲಿ ಮಡಿದ . ಅವನ ಸತ್ತ ಸುದ್ದಿ ತಿಳಿಯುತ್ತಲೆ ಚೋಳಸೇನೆ ದಿಕ್ಕಾಪಾಲಾಗಿ ಓಡಿತು . ತಲಕಾಡ ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು . ಸಮಸ್ತ ಸೇನೆಯು ' ತಲಕಾಡುಗೊಂಡನಿಗೆ ಜಯವಾಗಲಿ ' ಎಂದು ಜೈಕಾರ ಹಾಕಿತು .

## ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ .

**1.** " ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ "

| Download: Kannadapdf.com | https://kannadapdf.com/ |
| --- | --- |

ಆಯ್ಕೆ : ಈ ವಾಕ್ಯವನ್ನು ಸ.ಶಿ.ಮರುಳಯ್ಯ ಅವರು ಅವರು ರಚಿಸಿರುವ ' ನಾಟ್ಯ ಮಯೂರಿ ' ಎಂಬ ಕೃತಿಯಿಂದ ಆಯ್ಕೆಮಾಡಲಾದ ' ಪ್ರಜಾನಿಷ್ಠೆ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಸಂದರ್ಭ . ವಿಷ್ಣುವರ್ಧನನು ಕುಲೋತ್ತುಂಗ ಚೋಳನ ದಂಡನಾಯಕ ಆದಿಯಮನನ್ನು ಯುದ್ಧದಲ್ಲಿ ಸೋಲಿಸಿ , ತಲಕಾಡನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಹಲವರು ತಲಕಾಡು ನಗರವನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದ ಸಂದರ್ಭದಲ್ಲಿ ಪ್ರಜಾಪಾಲಕನಾದ ವಿಷ್ಣುವರ್ಧನನ್ನು ಸೈನಿಕರಿಗೆ " ಸೆರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ : ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ " ಎಂದು ಹೇಳುತ್ತಾನೆ .

ಸ್ವಾರಸ್ಯ : ಇಲ್ಲಿ ವಿಷ್ಣುವರ್ಧನನಲ್ಲಿದ್ದ ಮಾನವೀಯ ಗುಣ ಹಾಗೂ ಪ್ರಜಾಹಿತಚಿಂತನೆ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿದೆ .

**2. " ತಲಕಾಡುಗೊಂಡನಿಗೆ ಜಯವಾಗಲಿ "**

ಆಯ್ಕೆ : ಈ ವಾಕ್ಯವನ್ನು ಸ.ಶಿ.ಮರುಳಯ್ಯ ಅವರು ಅವರು ರಚಿಸಿರುವ ' ನಾಟ್ಯ ಮಯೂರಿ ' ಎಂಬ ಕೃತಿಯಿಂದ ಆಯ್ಕೆಮಾಡಲಾದ ' ಪ್ರಜಾನಿಷ್ಠೆ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಸಂದರ್ಭ : ವಿಷ್ಣುವರ್ಧನನು ಕುಲೋತ್ತುಂಗ ಚೋಳನ ದಂಡನಾಯಕ ಆದಿಯಮನನ್ನು ಯುದ್ಧದಲ್ಲಿ ಸೋಲಿಸಿ , ತಲಕಾಡನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಸಮಸ್ತ ಸೇನೆಯು ಈ ರೀತಿ ಜೈಕಾರ ಹಾಕಿತು .

ಸ್ವಾರಸ್ಯ : ಇಲ್ಲಿ ವಿಷ್ಣುವರ್ಧನನ ಸೈನಿಕ ಶಕ್ತಿ , ತಲಕಾಡನ್ನು ವಶಪಡಿಸಿಕೊಂಡ ನಂತರ ಸೈನಿಕರ ವಿಜಯೋತ್ಸಾಹ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿದೆ .

**3. " ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ "**

ಆಯ್ಕೆ : ಈ ವಾಕ್ಯವನ್ನು ಸ.ಶಿ.ಮರುಳಯ್ಯ ಅವರು ಅವರು ರಚಿಸಿರುವ ' ನಾಟ್ಯ ಮಯೂರಿ ' ಎಂಬ ಕೃತಿಯಿಂದ ಆಯ್ಕೆಮಾಡಲಾದ ' ಪ್ರಜಾನಿಷ್ಠೆ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಸಂದರ್ಭ : ಈರಣ್ಣನು ಬೀರಣ್ಣನಿಂದ ಕೊಂಡುಕೊಂಡ ಹೊಲದಲ್ಲಿ ಉಳುತ್ತಿದ್ದಾಗ ಅಲ್ಲಿ ಒಂದು ಕೊಪ್ಪರಿಗೆಯಷ್ಟು ಹೊನ್ನು ಸಿಕ್ಕಿತು . ಅವನು ಅದನ್ನು ಪೂಜೆ ಮಾಡಿ ಬೀರಣ್ಣನ ಮ ತೆಗೆದುಕೊಂಡು ಹೋಗಿ ಇದು ನಿನ್ನ ಹೊಲದಲ್ಲಿ ಸಕ್ಕಿದೆ ತೆಗೆದುಕೋ ' ಎಂದನು . ಸಂದರ್ಭದಲ್ಲಿ ಬೀರಣ್ಣ ನಿನಗೆ ಹೊಲ ಮಾರಿದ ಮೇಲೆ ಅದು ನಿನಗೇ ಸೇರಬೇಕು . ಅದು ನನ್ನದಲ್ಲ . ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ ' ಎಂದು ನಿರಾಕರಿಸಿದನು .

ಸ್ವಾರಸ್ಯ : ಈ ಸಂದರ್ಭದಲ್ಲಿ ಈರಣ್ಣ ಮತ್ತು ಬೀರಣ್ಣ ಇವರಿಬ್ಬರಲ್ಲಿದ್ದ ನಿಸ್ವಾರ್ಥತೆ , ದುರಾಸೆ ಇಲ್ಲದ ಧರ್ಮಪರತೆ ಸ್ವಾರಸ್ಯಕರವಾಗಿ ಮೂಡಿಬಂದಿದೆ .

## ಈ ] ಬಿಟ್ಟಸ್ಥಳದಲ್ಲಿ ಸೂಕ್ತಪದವನ್ನು ತುಂಬಿರಿ .

೧. ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರಯಾತ್ರೆ ಹೊರಟಿತು

೨. ಮಾನವ ತನ್ನ ಮಾನವೀಯ ಗುಣಗಳನ್ನು ಗಾಳಿಯಲ್ಲಿ ತೂರಿಬಿಡಬಾರದು .

೩. ನಿಮ್ಮ ಊರಿನ ಹಣ ನಮ್ಮೂರಿನ ಏಳಿಗೆಗಾಗಿಯೇ ವಿನಿಯೋಗವಾಗಲಿ ,

೪. ಬನದಮ್ಮನ ಹಳ್ಳಿಯ ಜನರಿಗೆ ಸ್ವರ್ಗ ಒಂದೇ ಮೆಟ್ಟಿಲಲ್ಲಿ ಉಳಿಯಿತು .


| | |
|---|---|
| Download: Kannadapdf.com | https://kannadapdf.com/ |

## ಭಾಷಾ ಚಟುವಟಿಕೆ

### ಆ ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ .

**1 ,** ಅನುನಾಸಿಕ ಸಂಧಿ ಎಂದರೇನು **?** ಉದಾಹರಣೆ ಕೊಡಿ**.**

ಉತ್ತರ : ಕ.ಚ,ಟ ಕಾರಗಳಿಗೆ ಯಾವುದೇ ಅನುನಾಸಿಕವು ಪರವಾದರೂ ಕ ,ಕ್ಕೆ , ಚ ಕ್ಕೆ ಟ ಕ್ಕೆ ಣ , ತ ಕ್ಕೆ ನ ಪ ಕ್ಕೆ ಮ ಅನುನಾಸಿಕವು ಆದೇಶವಾಗಿ ಬಂದರೆ ಅನುಷಾಸಿಕ ಎನ್ನುವರು .

ಉದಾ**:**

ಚಿತ್ + ಮೂರ್ತಿ =ಚಿನ್ಮೂರ್ತಿ

ಷಟ್ + ಮುಖ =ಷಣ್ಮುಖ

ಸತ್ + ಮಾನ =ಸನ್ಮಾನ

ಚಿತ್ + ಮಯ =ಚಿನ್ಮಯ

**2 ,** ಕ್ರಿಯಾಸಮಾಸ ಎಂದರೇನು **?** ಉದಾಹರಣೆ ಕೊಡಿ**,**

ಉತ್ತರ : ಪೂರ್ವಪದವು ದ್ವಿತೀಯ ವಿಭಂಶವಾಗಿದ್ದು ಉತ್ತರಪದದಲ್ಲಿರುವ ಕ್ರಿಯೆಯೊಡನೆ ಸೇರಿ ಆದ ಸಮಾಸವೆ . ಕ್ರಿಯಾಸಮಾಸ ,

ಉದಾ : ಮನೆಯನ್ನು + ಕಟ್ಟಿದನು = ಮನೆಕಟ್ಟಿದನು . ..

ಮೈದಡವಿ . ಬಟ್ಟೆಯನ್ನು ಮೈಯನ್ನು ಮರೆತು ಮೈಮರೆತು .

ಕೈಯಂ + ಪಿಡಿದು = ಕೈವಿಡಿದು

ತಲೆಯನ್ನು + ಇಟ್ಟು = ತಲೆಯಿಟ್ಟು

ಮೈಯನ್ನು + ತಡವಿ = ಮೈದಡವಿ

ಕಣ್ಣನ್ನು + ತೆರೆ = ಕಣ್ಣರೆ

ಬಟ್ಟೆಯನ್ನು + ತೋರು = ಬಟ್ಟೆದೋರು .

ಆ ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದವನ್ನು ಬರೆಯಿರಿ

1,ಯ್,ರ್,ಲ್,ವ್, ಅವರ್ಗೀಯ ವ್ಯಂಜನಗಳು :ಙ್, ಞ್, ಣ್, ನ್, ಮ್ : ..........

| Download: Kannadapdf.com | https://kannadapdf.com/ |
|---|---|

2 , ಷಡಂಗ : ಜಶ್ತ್ವಸಂಧಿ: ಷಣ್ಮಾಸ :.........

3. ಈ ಹೊನ್ನು : ಗಮಕ ಸಮಾಸ : ಸ್ಥಾಪನೆ ಮಾಡು:............

4. ವಾಗ್ದೇವಿ :ಜಶ್ತ್ವಸಂಧಿ :: ಜಗಜ್ಯೋತಿ:..........

ಸರಿ ಉತ್ತರಗಳು,

೧, ಅನುನಾಸಿಕಾಕ್ಷರಗಳು . **2** ,ಅನುನಾಸಿಕ ಸಂಧಿ **3,**ಕಿಯಾ ಸಮಾಸ **4.** ಶ್ಚುತ್ವ ಸಂಧಿ

## ಈ ) ಕೊಟ್ಟಿರುವ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ ,

### 1. " ಹಿತ್ತಲ ಗಿಡ ಮದ್ದಲ್ಲ "

ವೇದ ಸುಳ್ಳಾದರೂ ಗಾದೆ ಸುಳ್ಳಾಗದು , ಗಾದೆಗಳು ವೇದಗಳಿಗೆ ಸಮ . ಇವು ನಮ್ಮ ಹಿರಿಯರ ಅನುಭವದ ಮಾತುಗಳು , ಗಾದೆಗಳು ನೋಡಲು ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ , ಆಂತಹ ಗಾದೆಗಳಲ್ಲಿ ಈ ಗಾದೆ ಮಾತು ಸಹ ಒಂದು.

ತಮ್ಮ ತಮ್ಮ ಮನೆಯ ಅಂಗಳದಲ್ಲಿ ಬೆಳೆದ ಗಿಡ ಮರಗಳಿಗೆ ನಾವು ಹೆಚ್ಚು ಪ್ರಾಮುಖ್ಯತೆ ಕೊಡುವುದಿಲ್ಲ .

ತಮ್ಮ ಬಳಿ ಇರುವ ವಸ್ತುಗಳಿಗೆ , ಮನುಷ್ಯರಿಗೆ ನಮ್ಮ ಮನಸ್ಸಿನಲ್ಲಿ ಗೌರವ , ಬೆಲೆ ಇರುವುದಿಲ್ಲ , ಹಳೆಯ ಕಾಲದಲ್ಲಿ ಎಲ್ಲಾ ರೋಗಗಳಿಗೆ ಗಿಡಮೂಲಿಕೆಗಳಿಂದ ಔಷಧಿ ತಯಾರಿಸಿ ರೋಗವನ್ನು ಗುಣ ಪಡಿಸುತ್ತಿದ್ದರು .

ನಮ್ಮ ಮನೆಯ ಹಿತ್ತಲಲ್ಲಿ ಬೆಳೆದ ಗಿಡಗಳಿಂದ ಮಾಡಿದ ಮದ್ದನ್ನು ಕುಲ್ಲಕವಾಗಿ ಕಾಣುವ ಮನೋಭಾವನೆ ಇತ್ತು ,

ಅದೇ ಬೇರೆಯವರ ತೋಟದ ಗಿಡದಿಂದ ತಯಾರಿಸಿದ ಔಷಧಿಗೆ ಬೆಲೆ ಹೆಚ್ಚು ಕೊಡುತ್ತಿದ್ದರು.ಆದರಿಂದ ಈ ಗಾದೆ ಹುಟ್ಟಿದೆ . ಪ್ರಸ್ತುತ ದಿನಮಾನಗಳಲ್ಲಿ ನಮ್ಮ ಮನೆಯಲ್ಲಿ ಇರುವ ವಸ್ತಗಳಿಗೆ ನಾವು ಬೆಲೆಕೊಡದೆ ಅಕ್ಕಪಕ್ಕದ ಮನೆಗಳ ವಸ್ತುಗಳನ್ನು ನೋಡಿ ದುಭಾರಿ ವಸ್ತುಗಳು ,ಬೆಲೆ ಬಾಳುವ ವಸ್ತುಗಳು ಅವರ ಬಳಿ ಇವೆ .

ನಮ್ಮಲ್ಲಿ ಈ ರೀತಿ ವಸ್ತುಗಳು ಎಲ್ಲಾ ಎಂದು ಕೊರಗುತ್ತೇವೆ , ಒಮ್ಮೊಮ್ಮೆ ಖಿನ್ನತೆಗೂ ನಮ್ಮ ಬಳಿ ಏನಿರುತ್ತದೆ ಅದು ಯಾವಾಗಲೂ ಬೆಲೆ ಕಡಿಮೆ ನಮ್ಮ ಕೈಗೆ ಯಾವುದು ಎಟಕುವುದಿಲ್ಲವೋ ಅದರ ಬೆಲೆ ಜಾಸ್ತಿ ಅನ್ನಿಸುತ್ತದೆ ,

ಸುಲಭವಾಗಿ ಸಿಗುತ್ತದೆ ' ಎಂದ ಮಾತ್ರಕ್ಕೆ ಆ ವಸ್ತುವಿಗೆ ಬೆಲೆ ಇಲ್ಲ ಎಂದು ಭಾವಿಸಬಾರದು . ನಮ್ಮ ಜೊತೆಗೆ ಇರುವ ವಸ್ತು , ವ್ಯಕ್ತಿಗಳನ್ನು ಅರ್ಥಮಾಡಿಕೊಂಡು ಜೀವನ ನಡೆಸಬೇಕು .

### 2. " ದೂರದ ಬೆಟ್ಟ ನುಣ್ಣಗೆ "

ವೇದ ಸುಳ್ಳಾದರೂ ಗಾದೆ ಸುಳ್ಳಾಗದು . ಗಾದೆಗಳು ವೇದಗಳಿಗೆ ಸಮ . ಇವು ನಮ್ಮ ಹಿರಿಯರ ಅನುಭವದ ಮಾತುಗಳು . ಗಾದೆಗಳು ನೋಡಲು ವಾಮನನಾದರೂ ಆರ್ಥದಲ್ಲಿ ತ್ರಿವಿಕ್ರಮನಂತೆ , ಅಂತಹ ಗಾದೆಗಳಲ್ಲಿ ಈ ಗಾದೆ ಮಾತು ಸಹ ಒಂದು . ದೂರದಲ್ಲಿರುವ ಬೆಟ್ಟ ನೋಡುವುದಕ್ಕೆ ಚಿಕ್ಕದಾಗಿ ಕಾಣಿಸುತ್ತದೆ .

kannadapdf.com

ದೂರದಿಂದ ಅದನ್ನು ಸುಲಭವಾಗಿ ಹತ್ತಬಹುದು ಎಂದು ಅನ್ನಿಸುತ್ತದೆ . ಆದರೆ ಬೆಟ್ಟದ ನಿಜ ಸ್ವರೂಪ ತಿಳಿಯಬೇಕಾದರೆ ಹತ್ತಿರ ಹೋಗಿ ನೋಡಬೇಕು . ಆಗ ಬೆಟ್ಟದ ಮೇಲಿರುವ ಕಲ್ಲು ಮುಳ್ಳು , ಅದರ ಎತ್ತರ ಎಷ್ಟು ಎಂದು ತಿಳಿಯುತ್ತದೆ .

ಹತ್ತಿರ ಹೋಗಿ ನೋಡಿದಾಗ , ದೂರದಿಂದ ಅಂದುಕೊಂಡಷ್ಟು ಸುಲಭವಾಗಿ ಅದನ್ನು ಹತ್ತಲು ಸಾಧ್ಯವಿಲ್ಲ ಎನ್ನುವ ಅರಿವು ನಮಗೆ ಆಗುತ್ತದೆ .ಹಾಗೆಯೇ ಸಂಬಂಧಗಳು ಸಹ ದೂರದಿಂದ ನೋಡಿದಾಗ ಎಲ್ಲಾರೂ ನಮ್ಮವರೇ ಎಂದು ಗೊತ್ತಾಗುತ್ತದೆ .

'ದೂರವಿದ್ದರೆ ಪರಿಮಳ , ಹತ್ತಿರ ಬಂದರೆ ವಾಸನೆ ' ಎಂಬ ಮಾತಿನಂತೆ ಮನುಷ್ಯನ ನಿಜವಾದ ಬಣ್ಣ ತಿಳಿಯಲು ಅವನ ಜೊತೆಗೆ ಇದ್ದು ನೋಡಬೇಕು . ಪ್ರಪಂಚದಲ್ಲಿ ಎಲ್ಲಾರಿಗೂ ಕಷ್ಟ ಬರುತ್ತದೆ ಎಂಬ ಅಂಶವನ್ನು ನಾವು ಮರೆಯಬಾರದು .

ದೇವರು ನನಗೆ ಮಾತ್ರ ಕಷ್ಟ ಕೊಟ್ಟಿದ್ದಾನೆ . ಬೇರೆಯವರು ನಗುನಗುತ್ತಾ ಜೀವನ ಸಾಗಿಸುತ್ತಿದ್ದಾರೆ . ಎಂದು ಕೊಂಡು ಕೊರಗಬಾರದು . ಅವರ ಜೀವನದಲ್ಲಿ ಎಷ್ಟು ಕಷ್ಟಗಳಿವೆ ಎಂದು ಅವರ ಹತ್ತಿರ ಹೋದಾಗ ತಿಳಿಯುತ್ತದೆ .

ಎಲ್ಲಾರ ಮನೆಯ ದೋಸೆನೂ ತೂತೆ ಎಂಬ ಸತ್ಯ ತಿಳಿದು ಬದುಕಬೇಕಾಗಿದೆ.

KannadaPdf.com



| Download: Kannadapdf.com | https://kannadapdf.com/ |
|---|---|